# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-524/2015/ಡಿಆರ್ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 16/1/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಹೆಚ್.ಬಿ.ಜೆಟ್ಟಪ್ಪ, ಹಿಂದಿನ ಮುಖ್ಯಾಧಿಕಾರಿ, ನಗರಸಭೆ, ಹರಪನಹಳ್ಳಿ, ದಾವಣಗೆರೆ, (ಹಾಲಿ ನಿವೃತ್ತ), (2) ಶ್ರೀ.ಟಿ.ಮಲ್ಲಪ್ಪ, ಹಿಂದಿನ ಉಪ ವಿಭಾಗಾಧಿಕಾರಿ, ಹರಪನಹಳ್ಳಿ ಉಪ ವಿಭಾಗ ದಾವಣಗೆರೆ (ಹಾಲಿ ನಿವೃತ್ತ), (3) ಶ್ರೀ.ಬಿ.ಓ.ನಾರಾಯಣಸ್ವಾಮಿ, ಹಿಂದಿನ ತಹಶೀಲ್ದಾರ್, ಹರಪನಹಳ್ಳಿ ತಾಲ್ಲೂಕು, ದಾವಣಗರೆ ಜಿಲ್ಲೆ, (ಹಾಲಿ ನಿವೃತ್ತ) (4) ಶ್ರೀ.ಅರವಿಂದ ಎ ಸಂಡೂರ, ಗ್ರಾಮ ಲೆಕ್ಕಿಗರು, ತಾಲ್ಲೂಕು ಕಚೇರಿ, ಹರಪನಹಳ್ಳಿ, ದಾವಣಗೆರೆ, (5) ಶ್ರೀ.ಎಸ್.ಚಂದ್ರಶೇಖರ್, ರಾಜಸ್ವ ನಿರೀಕ್ಷಕರು, ತಾಲ್ಲೂಕು ಕಚೇರಿ, ಹರಪನಹಳ್ಳಿ, ದಾವಣಗೆರೆ, ಮತ್ತು (6) ಶ್ರೀ.ಸಂತೋಷ್‌ಕುಮಾರ್, ಬಿಲ್ ಕಲೆಕ್ಟರ್, ನಗರಸಭೆ, ಹರಪನಹಳ್ಳಿ, ದಾವಣಗೆರೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1. ಶ್ರೀಮತಿ.ಉಮಾಮಹೇಶ್ವರಿ ಕೋಂ ಶಂಕರ್, 1ನೇ ವಾರ್ಡ್, ಜೋಯಿಸರಕೇರಿ, ಹರಪನಹಳ್ಳಿ ಅಂಚೆ ಮತ್ತು ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಹೆಚ್.ಬಿ.ಜೆಟ್ಟಪ್ಪ, ಹಿಂದಿನ ಮುಖ್ಯಾಧಿಕಾರಿ, ನಗರಸಭೆ, ಹರಪನಹಳ್ಳಿ, ದಾವಣಗೆರೆ, (ಹಾಲಿ ನಿವೃತ್ತ), (2) ಶ್ರೀ.ಟಿ.ಮಲ್ಲಪ್ಪ, ಹಿಂದಿನ ಉಪ ವಿಭಾಗಾಧಿಕಾರಿ, ಹರಪನಹಳ್ಳಿ ಉಪ ವಿಭಾಗ ದಾವಣಗೆರೆ (ಹಾಲಿ ನಿವೃತ್ತ), (3) ಶ್ರೀ.ಬಿ.ಓ.ನಾರಾಯಣಸ್ವಾಮಿ, ಹಿಂದಿನ ತಹಶೀಲ್ದಾರ್, ಹರಪನಹಳ್ಳಿ ತಾಲ್ಲೂಕು, ದಾವಣಗರೆ ಜಿಲ್ಲೆ, (ಹಾಲಿ ನಿವೃತ್ತ) (4) ಶ್ರೀ.ಅರವಿಂದ ಎ ಸಂಡೂರ, ಗ್ರಾಮ ಲೆಕ್ಕಿಗರು, ತಾಲ್ಲೂಕು ಕಚೇರಿ, ಹರಪನಹಳ್ಳಿ, ದಾವಣಗೆರೆ, (5) ಶ್ರೀ.ಎಸ್.ಚಂದ್ರಶೇಖರ್, ರಾಜಸ್ವ ನಿರೀಕ್ಷಕರು, ತಾಲ್ಲೂಕು ಕಚೇರಿ, ಹರಪನಹಳ್ಳಿ, ದಾವಣಗೆರೆ, ಮತ್ತು (6) ಶ್ರೀ.ಸಂತೋಷ್‌ಕುಮಾರ್, ಬಿಲ್ ಕಲೆಕ್ಟರ್, ನಗರಸಭೆ, ಹರಪನಹಳ್ಳಿ, ದಾವಣಗೆರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ 2009 ರಲ್ಲಿ ಸುರಿದ ಮಹಾ ಮಳೆಯಿಂದ ತೊಂದರೆಗೀಡಾದ ನೆರೆ ಸಂತ್ರಸ್ಥ ಫಲಾನುಭವಿಗಳ ಪಟ್ಟಿ ದೋಷಪೂರಿತವಾಗಿದ್ದು, ಆಸರೆ ಮನೆ ಹಸ್ತಾಂತರ

ಸಮಯದಲ್ಲಿ ನಿಯಮಗಳನ್ನು ಪಾಲಿಸದೆ ದಾಖಲೆಗಳನ್ನು ಸಮರ್ಪಕವಾಗಿ ಪರಿಶೀಲಿಸದೆ ಸಾಕಷ್ಟು ಸರ್ಕಾರಿ ನೌಕರರಿಗೆ, ಪಟ್ಟಣದಲ್ಲಿ ಸ್ವಂತ ಆರ್.ಸಿ.ಸಿ.ಮನೆಗಳನ್ನು ಹೊಂದಿದವರಿಗೆ ಹಾಗೂ ಆರ್ಥಿಕವಾಗಿ ಬಲಿಷ್ಠರಿದ್ದಂತಹವರಿಗೆ ಮನೆಗಳನ್ನು ಹಂಚಿಕೆ ಮಾಡಿದ್ದು, ಬಡ ನಿರ್ಗತಿಕರಿಗೆ ವಂಚನೆ ಮಾಡಿ ಭ್ರಷ್ಟಾಚಾರವೆಸಗಿ ನೈಜ ಫಲಾನುಭವಿಗಳನ್ನು ಕೈಬಿಟ್ಟಿರುತ್ತಾರೆ. ದಿ.20/6/12 ರ 540 ಮನೆಗಳ ಆಸರೆ ಮನೆ ಫಲಾನುಭವಿಗಳ ಪಟ್ಟಿಯಲ್ಲಿ ದೂರುದಾರರ ಹೆಸರಿಗೆ ಮನೆ ಮಂಜೂರಾಗಿದ್ದು, ಅಂತಿಮ ಫಲಾನುಭವಿಗಳ ಪಟ್ಟಿಯಲ್ಲಿ ಅಧಿಕಾರಿಗಳು ಅವರ ಹೆಸರನ್ನು ಕೈಬಿಟ್ಟಿರುತ್ತಾರೆ. ಇದನ್ನು ಪ್ರಶ್ನಿಸಿ ಕ್ರಮ ತೆಗೆದುಕೊಳ್ಳಲು ಮೇಲಾಧಿಕಾರಿಗಳ ಬಳಿ ಕೋರಿಕೊಂಡಾಗ ಅಧಿಕಾರಿಗಳು ನಿಮಗೆ ಮನೆ ಮಂಜೂರು ಮಾಡಿಕೊಡುತ್ತೇವೆ, ಸ್ವಲ್ಪ ತಾಳಿ ಎಂದು ಹೇಳಿದ್ದು, ಆದರೆ ಮನೆ ಮಂಜೂರು ಮಾಡಿರುವುದಿಲ್ಲ. ಅಧಿಕಾರಿಗಳು ತಮಗೆ ಇಷ್ಟ ಬಂದಂತೆ ಮನೆಗಳ ಪಟ್ಟಿಯನ್ನು ತಯಾರಿಸಿ ಅನ್ಯಾಯ ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸೆಪ್ಟಂಬರ್ 2009 ಮತ್ತು ಅಕ್ಟೋಬರ್–2010ರಲ್ಲಿ ಸುರಿದ ಮಳೆದಿಂದ ಹರಪ್ಪನಹಳಿ ಪಟ್ಟಣದಲ್ಲಿ ನೆರೆ ಹಾವಳಿಯಿಂದ ತೊಂದರೆಗೆ ಇಡಾದ ಸಂತ್ರಸ್ತರಪಟ್ಟಿಯನ್ನು ತಹಶೀಲ್ದಾರ್ ಹರಪ್ಪನಹಳ್ಳಿ, ಎ.ಸಿ., ಹರಪ್ಪನಹಳ್ಳಿ ಇವರು ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ತಯಾರಿಸಿರುತ್ತಾರೆ. ಅವರು ಹರಪ್ಪನಹಳ್ಳಿ ಪುರಸಭೆಗೆ ದಿ: 24.11.2011 ರಂದು ಕರ್ತವ್ಯಕ್ಕೆ ಹಾಜರಾಗಿದ್ದು ಅವರು ಬರುವ ಮುನ್ನವೆ ಫಲಾನುಬವಿಗಳ ಪಟ್ಟಿ ತಯಾರಿಸಲಾಗಿರುತ್ತದೆ. ಸದರಿ ಪಟ್ಟಿಗೆ ದಿ: 4.6.2012 ರಂದು ಅವರ ಸಹಿಯನ್ನು ಪಡೆದಿರುತ್ತಾರೆ. ನಂತರ ವಿವಿಧ ಕಾರ್ಯಾಲಯದಿಂದ ಆ ಪಟ್ಟಿಗೆ ಅನರ್ಹತೆ ಹೊಂದಿಗೆ ಫಲಾನುಭವಿಗಳ ಪಟ್ಟಿನ್ನು ಗ್ರಾಮ ಲೆಕ್ಕಾಧಿಕಾರಿಗಳಿ, ಆರಕ್ಷಕ ನಿರೀಕ್ಷಕರು, ತಹಶೀಲ್ದಾರ್ ರವರು ಹಾಗೂ ಪುರಸಭೆಯ ಕರವಸೂಲಿಗಾರರು ಸ್ಥಳ ತನಿಖೆ ಮಾಡಿ ಪಟ್ಟಿಯನ್ನು ತಯಾರಿಸಿದ್ದು ಆ ಪಟ್ಟಿಗೂ ಕೂಡ ದಿ: 29.8.2012 ರಂದು ಸಹಿ ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ.

4. 2ನೇ ಎದುರುದರರು ತಮ್ಮ ಆಕ್ಷೇಪಣೆಯಲ್ಲಿ 2009ರಲ್ಲಿ ಅತಿ ವೃಷ್ಟಿ ಮಳೆಯಿಂದಾಗಿ ಮನೆಗಳಿಗೆ ನಷ್ಟವಾದ ಸಮಯದಲ್ಲಿ ಅವರು ಹರಪ್ಪನಹಳ್ಳಿ ಎ.ಸಿ. ಯಾಗಿ ಕಾರ್ಯನಿರ್ವಹಿಸಿರುವುದಿಲ್ಲ. ಮನೆಗಳ ಫಲಾನುಭವಿಗಳ ಪಟ್ಟಿಯನ್ನು ತಯಾರಿಸುವಾಗ ಅವರು ಎ.ಸಿ.ಯಾಗಿ ಕಾರ್ಯನಿರ್ವಹಿಸಿರುವುದಿಲ್ಲ. 2012–13ನೇ ಸಾಲಿನಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಹರಪ್ಪನಹಳ್ಳಿ ಉಪ ವಿಭಾಗದಲ್ಲಿ ಉಪ ವಿಭಾಗಾಧಿಯಾಗಿ 6 ತಿಂಗಳು ಕಾರ್ಯನಿರ್ವಹಿಸಿರುತ್ತಾರೆ. ಆ ಸಮಯದಲ್ಲಿ ದಾವಣಗೆರೆ ಜಿಲ್ಲಾಧಿಕಾರಿಗಳಿಗೆ ಆಯ್ಕೆ ಪಟ್ಟಿಯನ್ನು ಸಲ್ಲಿಸುವಾಗ ಪುರಸಭೆಯಲ್ಲಿ ಅವರ ಸಹಿಯನ್ನು ಪಡೆದಿರುತ್ತಾರೆ ಎಂದು ಹೇಳಿರುತ್ತಾರೆ.

5. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಆಶ್ರಯ ನಿವೇಶನಗಳನ್ನು ವಿತರಿಸಲು 2012ನೇ ಸಾಲಿನಲ್ಲಿ ಪಟ್ಟಿಯನ್ನು ಅಲ್ಲಿನ ತಹಶಿಲ್ದಾರ್ ಹಾಗೂ ಪುರಸಭೆ ಮುಖ್ಯಾದಿಕಾರಿಗಳು ಮಾಡಿರುತ್ತಾರೆ. ನಂತರ ಸ್ಥಳೀಯ ಗ್ರಾಮ ಲೆಕ್ಕಿಗರು ಆರ್.ಐರವರು ಹಾಗೂ ಸಿಬ್ಬಂದಿಯವರು ಪರಿಶೀಲನೆ ಮಾಡಿ 65 ಫಲನುಭವಿಗಳ ಪಟ್ಟಿಯನ್ನು ಮಾಡಿರುತ್ತಾರೆ. ಪಟ್ಟಿ ಮಾಡುವ

ಸಮಯದಲ್ಲಿ ಅವರು ತಹಶೀಲ್ದಾರ್ ಆಗಿ ಕೆಲಸ ನಿರ್ವಹಿಸಿಲ್ಲ. ಪ್ರಭಾರ ತಹಶೀಲ್ದಾರ್ ಆಗಿ ದಿ: 7.6.2012 ರಿಂದ 24.6.2012ರವರೆಗೆ ಮಾತ್ರ ಕೆಲಸ ನಿರ್ವಹಿಸಿರುತ್ತಾರೆ.

6. 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅರ್ಜಿದಾರರು ವಾಸವಾಗಿರುವ 1ನೇ ವಾರ್ಡ್ ಜೊಹಿಸ್ಸಾಕೇರಿಯಲ್ಲಿರುವ ಮನೆಯು ಮಳೆ ಹಾನಿಯಿಂದ ಹಾನಿಯಾಗಿರುವ ಪ್ರದೇಶವಾಗಿರುವುದಿಲ್ಲ ಮತ್ತು ದೂರುದಾರರು ನೆರೆ ಸಂತ್ರಸ್ತರಾಗಿರುವುದಿಲ್ಲ. ಅರ್ಜಿದಾರರು ಪುರಸಭೆ ಹರಪ್ಪನಹಳ್ಳಿ ಇವರಿಗೆ ದಿ: 9.10.2014ರಂದು ಆಶ್ರಯ ಯೋಜನೆ ಅಡಿಯಲ್ಲಿ ಮನೆ ನಿವೇಶನಕ್ಕಾಗಿ ಪುರ ಸಭೆ ಹರಪ್ಪನಹಳ್ಳಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಿರಾಶ್ರಿತರಿಗೆ ಮನೆ ನೀಡುವ ಬಗ್ಗೆ ಫಲಾನುಭವಿಗಳ ಪಟ್ಟಿಯನ್ನು ಎ.ಸಿ., ತಹಶೀಲ್ದಾರ್, ಮುಖ್ಯಾಧಿಕಾರಿಗಳು ತಯಾರಿಸಿ ಮತ್ತೆ 65 ಅನರ್ಹ ಫಲಾನುಭವಿಗಳನ್ನು ಪಟ್ಟಿಯಿಂದ ತಗೆಯಲಾಗಿರುತ್ತದೆ ಮತ್ತು ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದುಕೊಂಡು ಹಂಚಿಕೆ ಮಾಡಲಾಗಿರುತ್ತದೆ ಎಂದು ಹೇಳಿರುತ್ತಾರೆ.

7. 5ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 6 ಜನ ಅಧಿಕಾರಿಗಳ ತಂಡ ಅನರ್ಹ ಫಲಾನುಭವಿಗಳ ಪರಿಶೀಲನೆ ಸಮಯದಲ್ಲಿ ಆಯ್ಕೆ ಪಟ್ಟಿಯಲ್ಲಿನ ಕ್ರಮ ಸಂಖ್ಯೆ: 492ರ ಫಲಾನುಭವಿಯಾದ ಶ್ರೀಮತಿ.ಉಮಾಮಹೇಶ್ವರಿ ಗಂಡ ಶಂಕರ್ ಇವರಿಗೆ ಸ್ವಂತ ಮನೆ ಇದ್ದು ಅಲ್ಲದೆ ಈ ಫಲಾನುಭವಿಗಳ ಮಗನಾದ ಕೆ. ಗಣೇಷ್ ರವರು ಕೆಇಬಿಯಲ್ಲಿ ಇಂಜಿನಿಯರ್ ಆಗಿ ನೇಮಕಾತಿ ಹೊಂದಿರುವುದರಿಂದ ಸದರಿಯವರನ್ನು ಅನರ್ಹರೆಂದು ಪರಿಗಣಿಸಿ ಪಟ್ಟಿಯಿಂದ ತೆಗೆಯಲು ಅಧಿಕಾರಿಗಳ ತಂಡ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆ.

8. 6ನೇ ಎದುರುದಾರರು ಯಾವುದೇ ಆಕ್ಷೆಪಣೆಯನ್ನು ಸಲ್ಲಿಸಿರುವುದಿಲ್ಲ.

9. ಎದುರುದಾರರು ಆಕ್ಷೆಪಣೆಯನ್ನು ಪರಿಶೀಲಿಸಿದಾಗ ದೂರುದಾರರಿಗೆ ಸ್ವಂತ ಮನೆ ಇದ್ದು ಅವರ ಮಗ ಕೆ.ಇ.ಬಿ ಯಲ್ಲಿ ಇಂಜಿನಿಯರ್ ಆಗಿ ನೇಮಕಾತಿ ಹೊಂದಿದ್ದು, ಮತ್ತು ದೂರುದಾರರು ಸಂತ್ರಸ್ತರಾಗಿರುವುದಿಲ್ಲವೆಂದು ಆಕ್ಷೇಪಣೆಯಲ್ಲಿ ತಿಳಿಸಿದ್ದು ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಸದರಿ ಅಂಶಗಳ ಬಗ್ಗೆ ತನಿಖೆ ನಡೆಸುವುದು ಸೂಕ್ತವೆಂದು ಕಂಡುಬಂದ ಕಾರಣ, ದೂರುದಾರರ ದೂರು ಹಾಗೂ ಎದುರುದಾರರ ಆಕ್ಷೇಪಣೆಗಳನ್ನು ಪೊಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ. ದಾವಣಗೆರೆ ಇವರಿಗೆ ಕಳುಹಿಸಿ

   i. ದೂರುದಾರರು ನೆರೆ ಸಂತ್ರಸ್ತರಾಗಿರುತ್ತಾರೆಯೇ
   ii. ದೂರುದಾರರಿಗೆ ಸ್ವಂತ ಮನೆ ಇದೆಯೇ ಅಥವಾ ಇಲ್ಲವೇ
   iii. ದೂರುದಾರರ ಮಗ ಕೆ.ಇ.ಬಿ ಯಲ್ಲಿ ಇಂಜಿನಿಯರ್ ಆಗಿ ನೇಮಕ ಹೊಂದಿರುತ್ತಾರೆಯೇ ಎಂದು ವಿಚಾರದ ಬಗ್ಗೆ ತನಿಖೆ ನಡೆಸಿ ದಾಖಲಾತಿಗಳ ಸಮೇತ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು.

10. ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು ವರದಿಯಲ್ಲಿ ದೂರುದಾರರಾದ ಶ್ರೀಮತಿ.ಉಮಾಮಹೇಶ್ವರಿ ಕೋಂ ಶಂಕರ್ ಇವರು

ನೆರೆಸಂತ್ರಸ್ಥರಾಗಿರುವುದಿಲ್ಲ. ಆದರೆ ನಿವೇಶನ ರಹಿತರಿಗೆ ನೀಡಲಾಗುವ ಆಶ್ರಯ ಯೋಜನೆಯ ಫಲಾನುಭವಿಯಾಗಿರುತ್ತಾರೆ. ಸ್ಥಳಕ್ಕೆ ಭೇಟಿ ನೀಡಿದ ಸಮೀಕ್ಷಾ ತಂಡದವರು ಶ್ರೀಮತಿ.ಉಮಾಮಹೇಶ್ವರಿ ಕೋಂ ಶಂಕರ್ ಇವರ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡದೆ ಇವರ ಗಂಡನ ಹೆಸರಿನವರೇ ಆದ ಬೇರೊಬ್ಬ ವ್ಯಕ್ತಿಯಾದ ಜಿ.ಶಂಕರ್ ಬಿನ್ ನೂರೇಂದ್ರಪ್ಪ ಇವರನ್ನು ವಿಚಾರಣೆ ಮಾಡಿದ್ದು, ಶಂಕರ್ ತಂದೆ ನೂರೇಂದ್ರಪ್ಪ ಇವರು ಮನೆಯನ್ನು ಹೊಂದಿದ್ದು, ಇವರ ಮಗ ವಿನಾಯಕ ಇವರು ಕೆ.ಇ.ಬಿ.ಯಲ್ಲಿ ಜೆ.ಇ. ಆಗಿ ಸರ್ಕಾರಿ ನೌಕರಿಯಲ್ಲಿರುತ್ತಾರೆ. ಸಮೀಕ್ಷಾ ತಂಡದವರು ಅವರೇ ಉಮಾಮಹೇಶ್ವರಿ ಕೋಂ ಶಂಕರ್ ಇವರ ಮಗ ಸರ್ಕಾರಿ ನೌಕರಿಯಲ್ಲಿರುತ್ತಾರೆಂದು ತಪ್ಪು ಮಾಹಿತಿ ನೀಡಿ ಅನರ್ಹ ಪಟ್ಟಿಗೆ ಸೇರಿಸಿರುವುದು ಕಂಡುಬರುತ್ತದೆ. ಶ್ರೀಮತಿ.ಉಮಾಮಹೇಶ್ವರಿ ಕೋಂ ಶಂಕರ್ ಇವರ ಹೆಸರಿನಲ್ಲಾಗಲೀ ಅಥವಾ ಅವರ ಕುಟುಂಬದವರ ಹೆಸರಿನಲ್ಲಾಗಲೀ ಯಾವುದೇ ನಿವೇಶನವನ್ನು ಹೊಂದಿರುವುದಿಲ್ಲವೆಂದು ವರದಿಯನ್ನು ನೀಡಿರುತ್ತಾರೆ.

11. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಸಮೀಕ್ಷಾ ತಂಡದವರು ನೀಡಿರುವ ತಪ್ಪು ಮಾಹಿತಿಯಿಂದ ದೂರುದಾರರು ಫಲಾನುಭವಿ ಪಟ್ಟಿಯಲ್ಲಿದ್ದರೂ ಸಹ ಅವರನ್ನು ಅನರ್ಹರ ಪಟ್ಟಿಗೆ ಸೇರಿಸಿರುವುದು ಕಂಡುಬರುತ್ತದೆ. ದೂರುದಾರರ ಬಗ್ಗೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕಲೆಹಾಕದೆ ವರದಿಯನ್ನು ನೀಡಿದ್ದು, ಮತ್ತು ಸದರಿ ವರದಿಯನ್ನು ಪರಿಶೀಲಿಸದೆ ಕ್ರಮವನ್ನು ಕೈಗೊಂಡು ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

12. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದೂರುದಾರರು ಯಾವುದೇ ನಿವೇಶನ ಅಥವಾ ಮನೆಯನ್ನು ಹೊಂದಿಲ್ಲವೆಂದು ಕಂಡುಬರುತ್ತದೆ. ಆದ್ದರಿಂದ, ಅವರಿಗೆ ನಿವೇಶನ ಅಥವಾ ಮನೆಯನ್ನು ಒದಗಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/1/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**